ಕರ್ನಾಟಕ ವಿಧಾನಸಭೆ

363 ಶ್ರೀ ಕುಮಾರಸ್ವಾಮಿ ಕೆ.ಜಿ.
ಮಾನ್ಯ ಸಾರಿಗೆ ಸಚಿವರು

ಅ) ಹಾಲಿ ಭದ್ರಾವತಿಗೆ ಸ್ಥಳಾಂತರಿಸುವ ಶಿವಮೊಗ್ಗ ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆ ಡಿಪೋವನ್ನು ಯಾವಾಗ ವರ್ಗಾಯಿಸಲಾಗುವುದು;

ಶಿವಮೊಗ್ಗ ಪಟ್ಟಣ ವ್ಯಾಪ್ತಿಯಲ್ಲಿ ನಿರ್ಮಿಸಲಾಗುತ್ತಿರುವ ನೂತನ ಬಸ್ ಘಟಕದ ಕಾಮಗಾರಿ ಕಾರ್ಯ ಪೂರ್ಣಗೊಂಡ ನಂತರ ವರ್ಗಾಯಿಸಲಾಗುವುದು.

ಆ) ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ಈ ಕೆಳಕಂಡ ಮಾರ್ಗಗಳಲ್ಲಿ KSRTC ಬಸ್ ಓಡಿಸಲು ಸಾರ್ವಜನಿಕರಿಂದ ಬೇಡಿಕೆ ಬಂದಿದೆಯೇ; ಈ ಮಾರ್ಗಗಳು ಲಾಭದಾಯಕವಾಗಿದ್ದು ಯಾವಾಗ ಪ್ರಾರಂಭಿಸಲಾಗುವುದು;

1. ಕೂಡ್ಲಿ–ಹೊಳೆಹೊನ್ನೂರು–ಭದ್ರಾವತಿ–N.R.ಪುರ–ಕೊಪ್ಪ–ಶೃಂಗೇರಿ.
2. ಕೊಡ್ಲಿ–ಶಿವಮೊಗ್ಗ–ಕೊಲ್ಲೂರು
3. ಕೊಡ್ಲಿ–ಶಿವಮೊಗ್ಗ–ಬಾಳೆಹೊನ್ನೂರು–ಕಳಸ–ಹೊರನಾಡು
4. ಕೊಡ್ಲಿ–ಶೃಂಗೇರಿ–ಧರ್ಮಸ್ಥಳ
5. ಕೊಡ್ಲಿ–ಶಿವಮೊಗ್ಗ–ಸಾಗರ–ಸಿಗಂಧೂರು

ಹೌದು.

ಈ ಎಲ್ಲಾ ಮಾರ್ಗಗಳು ರಾಷ್ಟ್ರೀಕೃತವಾಗದ ವಲಯದಲ್ಲಿದ್ದು ಸಾರ್ವಜನಿಕ ಪ್ರಯಾಣಿಕರ ಒತ್ತಡಕ್ಕನುಗುಣವಾಗಿ ಖಾಸಗಿ ಸಾರಿಗೆಗಳ ಪ್ರವರ್ತಕರು ಪ್ರಸ್ತುತ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದ್ದಾರೆ. ಈ ಕಾರಣದಿಂದಾಗಿ ಸಲಹೆ ನೀಡಿರುವ ಮಾರ್ಗಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆವತಿಯಿಂದ ಸಾರಿಗೆ ಸೌಕರ್ಯವನ್ನು ಒದಗಿಸಕೊಡುವುದು ಆಧಾಯದ ದೃಷ್ಟಿಯಿಂದ ಸಮಂಜಸವೆನಿಸುವುದಿಲ್ಲ.

ಇ) ಶಿವಮೊಗ್ಗ ಕೇಂದ್ರದಿಂದ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೆ ಬಸ್ ಸಂಪರ್ಕ ವ್ಯವಸ್ಥೆ ಬಗ್ಗೆ ಸಮೀಕ್ಷೆ ಮಾಡಲಾಗಿದೆಯೆ; ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಬಸ್ ಸಂಪರ್ಕಕ್ಕೆ ಸಂಬಂಧಿಸಿದಂತೆ ಸಮೀಕ್ಷೆ ಮಾಡಿರುವುದಿಲ್ಲ.

ಬೇಡಿಕೆಗಳಿಗೆ ಅನುಗುಣವಾಗಿ ಮಾರ್ಗ ಸಮೀಕ್ಷೆ ನಡೆಸಿ ಮೋಟಾರು ವಾಹನ ಕಾಯ್ದೆ 1988 ರ ಪ್ರಕರಣ 68(3)(ca) ಪ್ರಕಾರ ಮಾರ್ಗಗಳನ್ನು ರೂಪಿಸಲು ಕ್ರಮ ಕೈಗೊಳ್ಳಲಾಗುವುದು.

ಕೂಡ್ಲಿ ಪವಾಸಿ ಕೇಂದ್ರ ಮಾಡಿ ಸೌಲಭ್ಯ ಒದಗಿಸುವುದು.

364 ಶ್ರೀ ಕುಮಾರ ಸ್ವಾಮಿ ಕೆ.ಜಿ
ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು